# ಅಪ್ಪನ ಬೀಡಿ

## ಸುಧಾ ಯುಗಾದಿ ವಿಶೇಷಾಂಕ- 2017ರ ಪ್ರಬಂಧ ಸ್ಪರ್ಧೆಯಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದ ಪ್ರಬಂಧ

■ ಶಿ.ಜು. ಪಾಶ

ಅಪ್ಪ ಹಚ್ಚಿಕೊಂಡ ಬೀಡಿಯ ಮೂಲಕವೇ ನಾನು ಜಗತ್ತನ್ನು ನೋಡಲು ಆರಂಭಿಸಿದೆನೇನೋ! ನನ್ನೊಳಗೆ ಅಪ್ಪನ ಬೀಡಿಯ ಕಿಡಿಗಳೇ ಕಾಡುತ್ತಿರುತ್ತವೆ. ನನ್ನ ಮೊದಲ ಕವನ ಸಂಕಲನದ ಹೆಸರೂ ಕೂಡ 'ಅಪ್ಪನ ಬೀಡಿ'. ಹೈಸ್ಕೂಲಿನ ಹುಡುಗನಾಗಿದ್ದಾಗಿನ ನೆನಪು. ಒಂದಿಷ್ಟು ದಿನ ನಿರಂತರವಾಗಿ ಒಂದು ಕನಸು ಬೀಳುತ್ತಿತ್ತು; ಅಪ್ಪ ಬೀಡಿ ಸೇದುತ್ತಾ ಆಕಾಶ ನೋಡ್ತಾ ನಿಂತಿರೋ ಹಾಗೆ. ಇದ್ದಕ್ಕಿದ್ದಂತೆ ಮೋಡಗಳೆಲ್ಲ ಒಟ್ಟಾಗಿ ಅಪ್ಪನನ್ನು ಘೇರಾವು ಮಾಡಿದ ಹಾಗೆ. ಘೇರಾವು ಮಾಡಿದ ಮೋಡಗಳ ಮಧ್ಯದಲ್ಲಿ ಬೀಡಿಯ ಕಿಡಿಗಳೇ ಯುದ್ಧ ಮಾಡುತ್ತಿವೆಯೇನೋ ಅನ್ನೋ ಹಾಗೆ. ಕೊನೆಗೆ ಅಪ್ಪನೇ ಎಲ್ಲಾ ಮೋಡಗಳನ್ನು ಬೀಡಿಯ ಮೂಲಕವೇ ತನ್ನೊಳಗೆ ಎಳೆದು ಕೊಂಡು, ಆನಂದಿಸುತ್ತಲೇ, ತನ್ನೆರಡು ತುಟಿ, ಮೂಗಿನ ಮೂಲಕ ಮತ್ತೆ ಆಕಾಶಕ್ಕೆ ನೂಕಿದ ಹಾಗೆ. ಈಗಲೂ ಆಗಿನ ಕನಸು ಸ್ಪಷ್ಟವಾಗಿ ನೆನಪಲ್ಲಿ ಉಳಿದಿರುವುದು ನೋಡಿ ಆಶ್ಚರ್ಯದಿಂದಲೇ ನಗುತ್ತಿರುತ್ತೇನೆ.

ಅಪ್ಪ ಬೀಡಿ ಸೇದುತ್ತಾನೆಂದರೆ ಅವನ ಮಕ್ಕಳೂ ತುಟಿಯಲ್ಲಿ ಬೀಡಿಯಿಟ್ಟುಕೊಂಡು ಮಜಾ ಅನುಭವಿಸಿಯೇ ಇರುತ್ತಾರೆ ಎಂಬುದನ್ನು ಯಾರಾದರೂ ತಳ್ಳಿಹಾಕಲು ಸಾಧ್ಯವೇ? ನಮ್ಮ ಮನೆ ಮೊದಲಿಂದಲೂ ಅವಿಭಕ್ತ ಕುಟುಂಬದ ಆಲದ ಮರ. ಬೇರು ಒಂದೇ ಇದ್ದರೂ ಬಿಳಲುಗಳಿಗೆ ಲೆಕ್ಕವಿರಲಿಲ್ಲ. ಆಲದ ಮರದ ಬೇರು ತಾತ ಅಬ್ದುಲ್ ಸತ್ತಾರ್ ಅಂತ. ಅವರ ಏಕೈಕ ಮಗ ನಮ್ಮಪ್ಪ ಅಮೀರ್. ಇನ್ನುಳಿದಿದ್ದು ಹೆಣ್ಣು ಸಂತಾನ. ಹೆಣ್ಣು ಸಂತಾನ ಎಂದ ಮೇಲೆ ಆಗೆಲ್ಲ ಬೀಡಿ, ಸಿಗರೇಟಿನ ಚಟಗಳೆಲ್ಲ ಅವರಿಗೆಲ್ಲಿ. ತಾತ ಕೂಡ ಧೂಮಪಾನಿ. ಆದರೆ, ಅಪ್ಪನಂತೆ ಬೀಡಿ ಸೇದುತ್ತಿರಲಿಲ್ಲವಷ್ಟೆ. ತಾತನದೇನಿದ್ದರೂ ಬ್ರಿಸ್ಟಾಲ್ ಸಿಗರೇಟು. ಮನೆಯಲ್ಲಿನ ಹೆಣ್ಣುಮಕ್ಕಳೆಲ್ಲ ಬೀಡಿ ಕಟ್ಟುತ್ತಿದ್ದುದರಿಂದ ತಾತ ಬೀಡಿಯ ಸಹವಾಸ ಮಾಡಲಿಲ್ಲ. 'ತನ್ನ ಮನೆಯ ಹೆಣ್ಣು ಮಕ್ಕಳೇ ಕಟ್ಟೋ ಬೀಡಿ ಸೇದೋದಕ್ಕೆ ನಾನೇನ್ ಬಿಕಾರೀನಾ?' ಅಂತ ದೌಲತ್ತು ತೋರಿಸಿಕೊಂಡು ಬ್ರಿಸ್ಟಾಲ್ ಸಿಗರೇಟಿನ ರೇಂಜಿಗೆ ತನ್ನ ವ್ಯಕ್ತಿತ್ವ ಹಿಗ್ಗಿಸಿಕೊಂಡಿದ್ದ ನಮ್ ತಾತ.

ಅದೇಕೋ ಅಪ್ಪನಿಗೆ ಸಿಗರೇಟಿನ ರೇಂಜಿಗೆ ತನ್ನ ವ್ಯಕ್ತಿತ್ವ ಏರಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ. ಈಗಲೂ ಅಪ್ಪನದು ಅಪ್ಪಟ ಬೀಡಿಯ ಜೊತೆಜೊತೆಗೇನೇ ನಂಟು. ಅದು ಅಪ್ಪನ ಬಲಹೀನತೆಯೂ ಹೌದು ಆನೆ ಬಲವೂ ಹೌದು. ನಾನು ನೋಡಿದಾಗಿನಿಂದ ಅಪ್ಪ ಆಮ್ಲಜನಕಕ್ಕಿಂತ ಇಂಗಾಲದ ಡೈ ಆಕ್ಸೈಡನ್ನೇ ಹೆಚ್ಚು ಸೇವಿಸಿದ್ದು.

ನಾವೆಲ್ಲಾ ಆಗ ಸಣ್ಣ ಹುಡುಗರು. ಸೌದೆ ಒಡೆದು ಸುಸ್ತಾಗಿ ಮನೆಗೆ ಬರುತ್ತಿದ್ದ ಅಪ್ಪ ಗೋಡೆಗೆ ಬೆನ್ನು ಕೊಟ್ಟು, ಕಾಲು ಚಾಚಿ ಕುಳಿತು, ಚಡ್ಡಿಜೇಬು ತಡಕಾಡುತ್ತಿದ್ದ. ಜೇಬಲ್ಲಿ ಬೀಡಿಕಟ್ಟು ಒಮ್ಮೊಮ್ಮೆ ಇರುತ್ತಿತ್ತು ಒಮ್ಮೊಮ್ಮೆ ಇರುತ್ತಿರಲಿಲ್ಲ. ಬೀಡಿ ಕಟ್ಟಿದ್ದರೂ ಬೆಂಕಿಪೊಟ್ಣ ನಾಪತ್ತೆಯಾಗಿರೋದು. ಆಗ ಕಟ್ಟಿಂದ ಬೀಡಿ ತೆಗೆದು, 'ಬಚ್ಚೆ, ಹಚ್ಕೊಂಬಾರೋ' ಎಂದು ನಾನಿದ್ದಲ್ಲಿಗೇ ಎಸೆದು ಬಿಡೋದು ಅಪ್ಪನ ಸಂಪ್ರದಾಯಗಳಲ್ಲಿ ಒಂದಾಗಿತ್ತು. ಆಗೆಲ್ಲ ಗ್ಯಾಸು ಒಲೆಗಳಿರಲಿಲ್ಲ. ಸೀಮೆಣ್ಣೆ ಸ್ಟೌಗಳಿದ್ದರೂ ಬೀಡಿಗೂ ಈ ಸ್ಟೌಗಳಿಗೂ ಆಗಿ ಬರುತ್ತಿರಲಿಲ್ಲ. ಹಚ್ಚಿದ ಸ್ಟೌನಿಂದ ಬೀಡಿ ಹಚ್ಚಲು ಸಾಧ್ಯವೂ ಇರಲಿಲ್ಲ. ಊದಿ ಊದಿ ಸುಸ್ತಾದ ಮೇಲೆ ಅಪರೂಪಕ್ಕೆ ಬೀಡಿಗೆ ಕಿಡಿ ಹೊತ್ತಿಕೊಳ್ಳುತ್ತಿತ್ತು. ಆ ಬೀಡಿ ಸೇದಿದೋರಿಗೆ ಥಟ್ಟನೆ ಸೀಮೆಣ್ಣೆಯ ಸ್ಮೆಲ್ಲು ಬಡಿದು 'ಥುತ್ತೇರಿ ಮಾಕಿ' ಅನ್ನೋ ಬೈಗುಳ ಉಗಿಸುತ್ತಿತ್ತು. ಆದರೆ, ಸೌದೆ ಒಲೆಗೂ ಬೀಡಿಗೂ ಜನ್ಮಜನ್ಮಾಂತರದ ಸಂಬಂಧ! ಬೀಡಿಯ ಬಾಯಿಯನ್ನು ಅದಕ್ಕೆ ತಾಗಿಸಿ ಒಂದಿಷ್ಟು ಊದಿದರೆ ಕ್ಷಣ ಹತ್ತಿಕೊಳ್ಳೋದು. ಕಿಡಿ ಹತ್ತಿಕೊಂಡ ಕೂಡಲೇ ಒಲಿಂಪಿಕ್ಸ್ ಕ್ರೀಡೆಯ ಪಂಜು ಹಿಡಿದು ಓಡುತ್ತಾರಲ್ಲ ಹಾಗೆ ಬೀಡಿ ಹಿಡಿದುಕೊಂಡು ಅಪ್ಪ ಇದ್ದಲ್ಲಿಗೆ ಓಡಿ ಬರಬೇಕಿತ್ತು. ಅಪ್ಪ ಕಸಕ್ಕನೆ ಬೀಡಿ ಇಸ್ಕೊಂಡು, ತುಟಿಗೇರಿಸಿ, ದಮ್ಮು ಎಳೆಯಬೇಕಿತ್ತು. ಒಂದೇ ಸರಿಗೆ ಭಕಭಕಾಂತ ದಮ್ಮು ಎಳೆದರೆ ಮಾತ್ರ ಎಲ್ಲೋ ಸಾವಿನ ಅಂಚಿನಲ್ಲಿದ್ದ ಕಿಡಿಗೆ ಜೀವಬರುತ್ತಿತ್ತು. ಅದೆಲ್ಲಾ ಒಮ್ಮೊಮ್ಮೆ ಅಷ್ಟೆ. ಬಹಳಷ್ಟು ಬಾರಿ ಹತ್ತಿಕೊಂಡಿದ್ದ ಕಿಡಿ ಅಪ್ಪನ ಬೀಡಿ ತುಟಿಗೇರಿಸುವಷ್ಟರಲ್ಲಿಯೇ ತಣ್ಣನೆಯ ಸಾವು ಕಂಡಿರುತ್ತಿತ್ತು. ಮತ್ತೆ

